ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಲಾಕ್‌ಡೌನ್‌ನಿಂದ ರಾಜ್ಯದಲ್ಲಿ GST ನಿವ್ವಳ ಸಂಗ್ರಹಣೆಯಲ್ಲಿ ಖೋತಾ ಬಗ್ಗೆ

ಶ್ರೀ ಕೆ. ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು) -

367 (350) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕೇಂದ್ರ ಸರ್ಕಾರ ವಿಧಿಸಿದ ಸಂಪೂರ್ಣ ಲಾಕ್‌ಡೌನ್‌ನಿಂದ ರಾಜ್ಯದಲ್ಲಿ GST ನಿವ್ವಳ ಸಂಗ್ರಹಣೆಯಲ್ಲಿ ಖೋತಾ ಆಗಿರುವುದು ನಿಜವೇ; ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು;

(ಆ) ಈ ತೆರಿಗೆ ಸಂಗ್ರಹಣೆ ಖೋತಾವನ್ನು ನೀಗಿಸಲು ಕೇಂದ್ರ ಸರ್ಕಾರ ಸೂಚಿಸಿರುವ ಮಾರ್ಗೋಪಾಯಗಳೇನು; (ವಿವರಗಳನ್ನು ಒದಗಿಸುವುದು)

(ಇ) ಕೇಂದ್ರ ಸರ್ಕಾರದ ಮಾರ್ಗೋಪಾಯಗಳಲ್ಲಿ ರಾಜ್ಯ ಸರ್ಕಾರ ಅನುಸರಿಸಿರುವ ಅಥವಾ ಆಯ್ಕೆ ಮಾಡಿಕೊಂಡಿರುವ ಮಾರ್ಗೋಪಾಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಈ) ಈ ಮಾರ್ಗೋಪಾಯದ ರೀತ್ಯಾ, ರಾಜ್ಯ ಸರ್ಕಾರ ವಾಣಿಜ್ಯ ಬ್ಯಾಂಕ್‌ಗಳಿಂದ/ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದಿರುವ ಸಾಲವೆಷ್ಟು; ಈ ಸಾಲಗಳ ಮಂಜೂರಾತಿಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಿರ್ವಹಿಸಬೇಕಾಗಿರುವ ನಿಬಂಧನೆಗಳ ವಿವರ ನೀಡುವುದು;

(ಉ) ವಾಣಿಜ್ಯ ಬ್ಯಾಂಕ್/ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದಿರುವ ಸಾಲಗಳಲ್ಲಿ ಇಲಾಖಾವಾರು ಹಂಚಿಕೆಯಾಗಿರುವ ವಿವರ ನೀಡುವುದು; ಈ ಹಂಚಿಕೆಯಲ್ಲಿ ಕೇವಲ ನೀರಾವರಿ ಇಲಾಖೆಗೆ ಅತಿ ಹೆಚ್ಚು ಹಂಚಿಕೆಯಾಗಲು ಕಾರಣವೇನು; ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಇತರೆ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಇಲಾಖೆಗಳನ್ನು ಕಡೆಗಣಿಸಲು ಕಾರಣವೇನು? (ಸಂಪೂರ್ಣ ವಿವರ ನೀಡುವುದು)